**ಕವಿತೆ**



**ವಿಶಾಲ್ ಮ್ಯಾಸರ್**

**ಕಲೆ:** ರಮೇಶ್ ಚವ್ಹಾಣ



# ಇನ್ನೆಷ್ಟು ಅಂತರವಿದೆ

ಒಂದು ಟೇಬಲ್‌ನಲ್ಲಿ ಕುಳಿತು ಕಣ್ಣಿಗೆ ಕಣ್ಣಿಟ್ಟು
ನಾವು ನೋಡಿಕೊಳ್ಳಬಹುದು
ಇಬ್ಬರ ಒಳಗಿರುವ ದೋಣಿಗಳು
ಅದೇ ಸಾಗರವ ಸೇರುವ ಭರವಸೆ ಕಳೆದು ಹೋಗಿದೆ ಈಗ

ಮಾತಾಡಬಹುದು ಇನ್ನಷ್ಟು ಹರವಿಕೊಂಡು
ಲೆಕ್ಕ ಹಾಕಬಹುದು ಉಸಿರಿನ ಏರಿಳಿತಗಳ
ಆದರೂ
ಹುಟ್ಟುಗಳನ್ನು ಒಟ್ಟಿಗೆ ಹಾಕುವ ಇರಾದೆ ಇರುವ ನನಗೆ
ಟೇಬಲ್ ದೊಡ್ಡ ಅಂತರವೆ ಸರಿ
ಇನ್ನೆಷ್ಟು ಅಂತರವಿದೆ
ಈ ರೋಮಗಳ ನಡುವೆ
ಇನ್ನೆಷ್ಟು ಹತ್ತಿರವಿದೆ ಕಾಫಿ ಪೌಡರ್ ಮತ್ತು ಹಾಲಿನ ನಡುವೆ
ಈ ಸಾಸರ್ ಕಪ್ಪಿನ ತಳವ ಗಟ್ಟಿ ಹಿಡಿಯುವುದೇನೋ?

ನಿನ್ನ ಪ್ರೀತಿ ಸಿಗದ ಹೊರತು
ಆಗುವ ಭೇಟಿ ಕಾಫಿಗಳೆಲ್ಲ
ಬರಿಯ tissue ಪೇಪರ್‌ನ ಮೇಲಿನ ಸಣ್ಣ ಸಣ್ಣ ಚುಕ್ಕೆಗಳಂತೆ...